ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ಅವರು ಇಲ್ಲೇ ಇದ್ದಾರೆ, ಅವರ ಕಛೇರಿಯಲ್ಲೇ ಇದ್ದಾರೆ, ಆದರೆ ತಿರುಪತಿಯಲ್ಲಿ ಯಾರೂ ಇಲ್ಲ.

ಶ್ರೀ ಬಾಬುರಾವ್ ಬೊಂಚನಸೂರ್: ಅಧಿವೇಶನ ಮುಗಿದ ತಕ್ಷಣ ಸಲಹಾ ಸಮಿತಿಯನ್ನು ಕರೆಯುತ್ತೇನೆ.

(ಆ): ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆಯ ಕಾರ್ಮಿಕರಿಗೆ ಆಗಿರುವ ತೊಂದರೆಗಳ ಬಗ್ಗೆ.

ಶ್ರೀ ಎಸ್.ಎ. ರವೀಂದ್ರನಾಥ್ (ಮಾಯಕೊಂಡ): ಮಾನ್ಯ ಅಧ್ಯಕ್ಷರೆ, ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆಯ ಕಾರ್ಮಿಕರಿಗೆ ಆಗಿರುವ ತೊಂದರೆಗಳ ಬಗ್ಗೆ ಮಾನ್ಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರಿ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ವಿಧಾನಸಭಾ ಸದಸ್ಯರುಗಳಾದ ಶ್ರೀ ಜಗದೀಶ್ ಶೆಟ್ಟರ್, ಶ್ರೀ ಎಸ್.ಎ. ರವೀಂದ್ರನಾಥ್ ಮತ್ತು ಶ್ರೀ ಎಸ್. ಸುರೇಶ್ ಕುಮಾರ್ ಹಾಗೂ ಡಾ। ವೈ. ನಾಗಪ್ಪ ಮತ್ತು ವಿಶ್ವೇಶ್ವರ ಹೆಗಡೆ ಇವರುಗಳು ಮಂಡಿಸಿರುವ ಗಮನ ಸೆಳೆಯುವ ಸೂಚನೆ ಸಂ: 39, ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ(ನಿ) ದೊಡ್ಡಬಾತಿ ಇದರಲ್ಲಿನ ಕಾರ್ಮಿಕ ಸಮಸ್ಯೆ ಬಗ್ಗೆ ಈ ಕೆಳಕಂಡ ವಿಷಯ ಪ್ರಸ್ತಾಪಿಸಿರುತ್ತಾರೆ.

ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ (ನಿ) ದೊಡ್ಡಬಾತಿ ಇದರ ಆಡಳಿತ ವರ್ಗದವರ ಕಾರ್ಮಿಕ ವಿರೋಧಿ ನೀತಿಯಿಂದಾಗಿ 1992 ರಿಂದ 124 ಜನ ಕಾರ್ಮಿಕರಿಗೆ ಆಗಿರುವ ಅನ್ಯಾಯದ ಬಗ್ಗೆ ಉಭಯ ಸದನಗಳಲ್ಲಿ ಚರ್ಚೆಗಳಾಗಿ ಸಂಬಂಧಿಸಿದ ಸಕ್ಕರೆ ಖಾತೆ ಮಂತ್ರಿಗಳು ನೀಡಿದಂತಹ ಆಶ್ವಾಸನೆಗಳ ಆಧಾರದ ಮೇಲೆ (ದಿನಾಂಕ 14-5-98 ರಂದು 53 ಮಂದಿ ಕಾರ್ಮಿಕರ ಬಗ್ಗೆ ಆದಂತಹ ಒಪ್ಪಂದದ ಷರತ್ತಿನಂತೆ) ಕಾರ್ಮಿಕ ನ್ಯಾಯಾಲಯ ಹುಬ್ಬಳ್ಳಿಯಲ್ಲಿದ್ದ ಕೆಲಸ ನಿರಾಕರಣೆ ಸಂಬಂಧ ವ್ಯಾಜ್ಯಗಳನ್ನು ವಾಪಸ್ ಪಡೆದಿದ್ದರೂ ಸಹಾ ಒಪ್ಪಂದದಂತೆ ಸದರಿ ಕಾರ್ಮಿಕರಿಗೆ ಬಾಕಿ ವೇತನ ಹಾಗೂ ಇನ್ನಿತರೆ ಸೌಲಭ್ಯಗಳು ಇದುವರೆಗೂ ಸಿಗದೇ ತುಂಬಾ ತೊಂದರೆ ಆಗಿರುವ ಬಗ್ಗೆ ಮತ್ತು ಉಳಿದ 75 ಕಾರ್ಮಿಕರಿಗೂ ಆಶ್ವಾಸನೆಗಳ ಪ್ರಕಾರ ಶೀಘ್ರ ಹಾಗೂ ಪೂರ್ಣ ನ್ಯಾಯ ದೊರಕಬೇಕಾಗಿರುವ ಬಗ್ಗೆ ಮಾನ್ಯ ಸಹಕಾರಿ ಖಾತೆ ಸಚಿವರ ಗಮನ ಸೆಳೆಯಬಯಸುತ್ತೇನೆ.

ಗಮನ ಸೆಳೆಯುವ ಸೂಚನೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಮರದಿ ನೀಡಲಾಗಿದೆ.

ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ (ನಿ), ದೊಡ್ಡಬಾತಿ ಇದರಲ್ಲಿ 124 ಮಂದಿ ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕಿದ್ದು, ಇವರನ್ನು ಕಾರ್ಖಾನೆಯಲ್ಲಿ ಮರು ನೇಮಕ ಮಾಡಿಕೊಳ್ಳುವ ಬಗ್ಗೆ ಹಿಂದಿನಿಂದಲೂ ವಿವಾದವಿರುತ್ತದೆ. ಈ ವಿಷಯವು ಉಭಯ ಸದನಗಳಲ್ಲಿ ಚರ್ಚೆಯಾಗಿ ಇದಕ್ಕೆ ಪರಿಹಾರ ಕಂಡುಕೊಳ್ಳುವ ಸಲುವಾಗಿ, ಕಾರ್ಮಿಕ ನ್ಯಾಯಾಲಯದಲ್ಲಿ

ಮೊಕದ್ದಮೆ ಬಾಕಿ ಇದ್ದರೂ ಸಂಧಾನದ ಮೂಲಕ ಬಗೆಹರಿಸುವ ದೃಷ್ಟಿಯಿಂದ ದಿನಾಂಕ 15-1-97 ರಂದು ಅಂದಿನ ಸಕ್ಕರೆ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ, ಈ ಕೆಳಕಂಡ ತೀರ್ಮಾನಗಳನ್ನು ಕೈಗೊಳ್ಳಲಾಗಿತ್ತು.

1) ಕಾರ್ಮಿಕ ನ್ಯಾಯಾಲಯದಿಂದ ಅರ್ಜಿಯನ್ನು ಪಾಪಸ್ಸು ಪಡೆಯಬೇಕು. ಕಾರ್ಖಾನೆಯಲ್ಲಿ ನಿಯಮಾನುಸಾರ ನೇಮಕಗೊಂಡು ಕೆಲಸ ಮಾಡುತ್ತಿದ್ದ 51 ಅಥವಾ ಅದಕ್ಕಿಂತ 2-3 ಹೆಚ್ಚಿನ ಕಾರ್ಮಿಕರನ್ನು ಪರಸ್ಪರ ಚರ್ಚಿಸಿ, ಕೆಲಸಕ್ಕೆ ತೆಗೆದುಕೊಳ್ಳಬೇಕು, ದಿನಗೂಲಿ ಕಾರ್ಮಿಕರನ್ನು ತೆಗೆದುಕೊಳ್ಳಬೇಕಾದ ಬದ್ಧತೆ ಕಾರ್ಖಾನೆಗೆ ಇರುವುದಿಲ್ಲ.

2) ಬ್ಯಾಕ್ ವೇಜ್ ಕೊಡಬೇಕೆಂಬ ವಿಚಾರದಲ್ಲಿ ಎಷ್ಟು ಪ್ರಮಾಣ ಎಂಬ ಬಗ್ಗೆ ಪರಸ್ಪರ ಚರ್ಚೆಯ ಸಮ್ಮತಿ ಆಧಾರದ ಮೇಲೆ ನಿರ್ಣಯಿಸುವುದು.

3) ಈಗಾಗಲೇ ಕಾರ್ಮಿಕ ನ್ಯಾಯಾಲಯದಲ್ಲಿ 18 ಜನರಿಗೆ ಸಂಬಂಧಿಸಿದಂತೆ ಆಗಿರುವ ಆದೇಶವನ್ನು ಕಾರ್ಖಾನೆಯು ಪಾಲಿಸುವುದು.

ನಂತರ ದಿನಾಂಕ 15-4-97 ರಂದು ಸಭೆ ನಡೆದು ಕಾರ್ಮಿಕ ನ್ಯಾಯಾಲಯದಲ್ಲಿರುವ ವ್ಯಾಜ್ಯಗಳನ್ನು ಹಿಂತೆಗೆದುಕೊಳ್ಳಬೇಕು, ಖಾಯಂ ಮತ್ತು ತಾಂಗಾಮಿ ಹಾಗೂ ಇವುಗಳ ಸಂಖ್ಯೆಯನ್ನು ಪರಸ್ಪರ ಚರ್ಚಿಸಿ ಬಗೆಹರಿಸಿಕೊಳ್ಳಬೇಕು ಮತ್ತು 5 ವರ್ಷಗಳಿಗಿಂತ ಕಡಿಮೆ ಇಲ್ಲದೆ ಸೇವೆ ಸಲ್ಲಿಸಿದ ದಿನಗೂಲಿ ನೌಕರರನ್ನು ಕೆಲಸಕ್ಕೆ ತೆಗೆದುಕೊಳ್ಳುವ ಸಂಬಂಧ ನಿರ್ದಿಷ್ಟ ಸಂಖ್ಯೆಯ ಬಗ್ಗೆ ಚರ್ಚಿಸಿ ನಿರ್ಧರಿಸಬೇಕೆಂದು ಮತ್ತು ಬ್ಯಾಕ್ ವೇಜಸ್ ಪಾವತಿಸುವ ಬಗ್ಗೆ ಕಾರ್ಖಾನೆಯ ಹಣಕಾಸಿನ ಪರಿಸ್ಥಿತಿಯನ್ನು ಪರಿಗಣಿಸಿ, ತೀರ್ಮಾನಿಸಬಹುದ್ದು ಎಂದು ತೀರ್ಮಾನಿಸಲಾಗಿತ್ತು.

ಅಂತಿಮವಾಗಿ ದಿನಾಂಕ 14-5-99 ರಂದು ಅಂದಿನ ಸಕ್ಕರೆ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ನಡೆದಿರುತ್ತದೆ. ಈ ಸಭೆಯಲ್ಲಿ ಒಟ್ಟು 53 ಮಂದಿ ಕಾರ್ಮಿಕರನ್ನು ಶೇ. 40 ರಷ್ಟು ಬಾಕಿ ವೇತನ ಪಾವತಿಯೊಂದಿಗೆ ಕೆಲಸಕ್ಕೆ ತೆಗೆದುಕೊಳ್ಳಲು ತೀರ್ಮಾನವಾಗಿರುತ್ತದೆ. ಈ ಕಾರ್ಮಿಕರು ಹುಬ್ಬಳ್ಳಿ ನ್ಯಾಯಾಲಯದ ಮುಂದೆ (ಕೆಲಸ ನಿರಾಕರಣೆ ಬಗ್ಗೆ) ಹೂಡಿರುವ ವ್ಯಾಜ್ಯ ಹಿಂತೆಗೆದುಕೊಳ್ಳಬೇಕೆಂದು ನಂತರ ಇವರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕೆಂದೂ ತೀರ್ಮಾನವಾಗಿರುತ್ತದೆ.

ದಿನಾಂಕ 14-5-1998ರ ಸಭೆಯ ತೀರ್ಮಾನದ ಪ್ರಕಾರ 53 ಜನ ಕಾರ್ಮಿಕರು, ಕಾರ್ಮಿಕ ನ್ಯಾಯಾಲಯದಲ್ಲಿನ ಕೆಲಸ ನಿರಾಕರಣೆಯ ವ್ಯಾಜ್ಯಗಳನ್ನು ಹಿಂತೆಗೆದುಕೊಳ್ಳುವ ವಿಷಯದಲ್ಲಿ ವಿವಾದ ಉಂಟಾಗಿ ಕಾರ್ಖಾನೆಯವರೂ ಒಪ್ಪಂದವನ್ನು ಜಾರಿಗೊಳಿಸಿರಲಿಲ್ಲ. ಈ ಮಧ್ಯೆ ಸದರಿ ಕಾರ್ಮಿಕರು ಕಾರ್ಖಾನೆಯವರು ದಿನಾಂಕ 14-5-98 ರಂದು ಆದ ಒಪ್ಪಂದದ ಅನುಷ್ಠಾನಗೊಳಿಸದೇ ಇರುವುದರ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 13524:99 ರಲ್ಲಿ ದಾಖಲಿಸಿದ್ದು ನ್ಯಾಯಾಲಯವು ದಿನಾಂಕ: 27-9-99 ರಂದು ಮಧ್ಯಂತರ ಆದೇಶ ಹೊರಡಿಸಿ, 50 ಮಂದಿ ಕಾರ್ಮಿಕರನ್ನು ಪ್ರಸ್ತುತ ವೇತನ (Current

Wages) ಮೇಲೆ ಪುನರ್‌ನೇಮಕ ಮಾಡಿಕೊಳ್ಳಲು ಆದೇಶಿಸಿದೆ. ಇದರಂತೆ ಕಾರ್ಖಾನೆಯವರು 50 ಮಂದಿ ಕಾರ್ಮಿಕರನ್ನು ನ್ಯಾಯಾಲಯದ ಆದೇಶಕ್ಕನುಗುಣವಾಗಿ ನೇಮಕ ಮಾಡಿಕೊಂಡಿರುತ್ತಾರೆ. ಸದರಿ ಕಾರ್ಮಿಕರ ಬಾಕಿ ವೇತನ ಪಾವತಿ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯವು ಯಾವುದೇ ಆದೇಶ ನೀಡಿರುವುದಿಲ್ಲ. ಸದರಿ ರಿಟ್ ಅರ್ಜಿಯು ವಿಭಾಗೀಯ ಪೀಠದ ಮುಂದೆ ಇತ್ಯರ್ಥಕ್ಕಾಗಿ ಬಾಕಿ ಇರುತ್ತದೆ.

ವಿಷಯವು ನ್ಯಾಯಾಲಯದ ಮುಂದೆ ಇರುವುದರಿಂದ ಈ ಬಗ್ಗೆ ಈ ಹಂತದಲ್ಲಿ ಯಾವುದೇ ಕ್ರಮಕ್ಕೆ ಅವಕಾಶವಿರುವುದಿಲ್ಲ. ಉಳಿದ 71 ಮಂದಿ ಕಾರ್ಮಿಕರ ಪುನರ್ ನೇಮಕಾತಿ ವಿಚಾರ ರೆಫರನ್ಸ್ ನಂ. 2:93 ರಲ್ಲಿ ಹುಬ್ಬಳ್ಳಿ ಕಾರ್ಮಿಕ ನ್ಯಾಯಾಲಯದ ಮುಂದೆ ಇರುವುದರಿಂದ, ಇವರ ಪುನರ್ ನೇಮಕಾತಿ ವಿಷಯ ನ್ಯಾಯಾಲಯವು ನೀಡುವ ತೀರ್ಪಿನ ಮೇಲೆ ಅವಲಂಬಿತವಾಗಿರುತ್ತದೆ.

ಶ್ರೀ ಎಸ್.ಎ. ರವೀಂದ್ರನಾಥ್: ಮಾನ್ಯ ಅಧ್ಯಕ್ಷರೆ, ಈ ಹಿಂದೆ ಏನು 40 ಪರ್‌ಸೆಂಟ್ ವೇಜಸ್ ಕೊಡಬೇಕೆಂದು ತೀರ್ಮಾನವಾಗಿದೆ ಅದನ್ನು ಇಮುವರೆಗೆ ಕೊಟ್ಟಿಲ್ಲ. ಕಾರ್ಮಿಕರ ನ್ಯಾಯಾಲಯದಲ್ಲಿ ನಾವೇನು ಮೊಕದ್ದಮೆ ಹಾಕಿದ್ದೆವು ಅದನ್ನು ವಾಪಸ್ ತೆಗೆದುಕೊಂಡರೆ ಕೊಡುವುದಾಗಿ ಹೇಳಿದ್ದರು. ನಾನು ಅದನ್ನು ವಾಪಸ್ ತೆಗೆದುಕೊಂಡಿದ್ದೇವೆ. ಉಳಿದಿರುವ 75 ಜನರನ್ನೂ ಸೌಕರಿಗೆ ತೆಗೆದುಕೊಳ್ಳಬೇಕು. ಕಾರ್ಮಿಕರಿಂದ ಪ್ರಧಾನ ಮಂತ್ರಿಗಳ ಪರಿಹಾರ ನಿಧಿಗೆಂದು 1999ರ ಆಗಸ್ಟ್‌ನಲ್ಲಿ 78,627 ರೂಪಾಯಿ ಸಂಗ್ರಹ ಮಾಡಿರುತ್ತಾರೆ. ಆದರೆ ಆ ಹಣವೂ ಇದುವರೆಗೂ ಅಲ್ಲೇ ಇದೆ. ಅದನ್ನು ಪ್ರಧಾನಮಂತ್ರಿಗಳ ಪರಿಹಾರ ನಿಧಿಗೆ ಕೊಟ್ಟಿಲ್ಲ. ಇದನ್ನು ಪ್ರಧಾನ ಮಂತ್ರಿಗಳ ಪರಿಹಾರ ನಿಧಿಗೆ ಕೊಡುವ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬೈ. ನಾಗಪ್ಪ: ಮಾನ್ಯ ಅಧ್ಯಕ್ಷರೇ, ಸುಮಾರು 10 ವರ್ಷಗಳಿಂದಲೂ ಈ ವಿಷಯ ಹಾಗೇ ಇದೆ. ಸರ್ಕಾರ ಇವತ್ತು ಮನಸ್ಸು ಮಾಡಿದರೆ ಇದನ್ನು ತ್ವರಿತವಾಗಿ ಬಗೆಹರಿಸಬಹುದು. ನಾನು ವಿತಕ್ಕಾಗಿ ಈ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದೆ ಎಂದರೆ, ಪ್ರತಿ 4-8 ದಿವಸಕ್ಕೊಮ್ಮೆ ನಮ್ಮ ಮನೆಗೆ ಬಂದು ಈ ವಿಚಾರಕ್ಕೆ ಸಂಬಂಧಪಟ್ಟವರು ಬಂದು ಗಲಾಟೆ ಮಾಡುತ್ತಿದ್ದಾರೆ ಮತ್ತು ಈ ಬಗ್ಗೆ ಅಲ್ಲಿ ಸತ್ಯಾಗ್ರಹವನ್ನೂ ಸಹಾ ಮಾಡುತ್ತಿದ್ದಾರೆ. ಇವತ್ತು ನಮ್ಮ ಪಕ್ಷದ ಸರ್ಕಾರ ಅಧಿಕಾರದಲ್ಲಿದ್ದು, ನಾನು ಆಳುವ ಪಕ್ಷದ ಶಾಸಕನಾಗಿದ್ದರೂ ಕೂಡ ನಾನು ಇವತ್ತು ಅವರಿಗೆ ನ್ಯಾಯ ದೊರಕಿಸಿಕೊಡಲಿಕ್ಕೆ ಆಗಲಿಲ್ಲವೆಂದರೆ ಬಹಳ ಬೇಸರ ಉಂಟಾಗುತ್ತದೆ. ಸಾಕಷ್ಟು ಅಕ್ರಮಗಳು ಆ ಒಂದು ಸಕ್ಕರೆ ಕಾರ್ಖಾನೆಯಲ್ಲಿ ನಡೆಯುತ್ತಿದೆ. ಅಲ್ಲಿ ಇರತಕ್ಕಂಥ ಹಾಲಿ ಅಧ್ಯಕ್ಷರು, he has kept that factory as a political weapon in his hand. ಇವರೇನು ಮಾಡುತ್ತಾರೆ ಎಂದರೆ, ಚುನಾವಣೆ ಬಂದಾಗ ಅಲ್ಲಿಯ ಕಾರ್ಮಿಕರಿಂದ ಪ್ರತಿಯೊಂದು ತಿಂಗಳ ವೇತನವನ್ನು ಅವರಿಗೆ ಕಡ್ಡಾಯವಾಗಿ ಕೊಡುವಂತೆ ಸೂಚಿಸುತ್ತಾರೆ. ಇದಲ್ಲದೇ ಒಂದು ತಿಂಗಳು ಅವರು ಕ್ಯಾಂಪೈನ್‌ಗೆ ಸಹಾ ಹೋಗುವಂತೆ ಮಾಡುತ್ತಾರೆ. ಇದರ ಜೊತೆಗೆ ಪ್ರಾಕ್ಸಿ ಮತಗಳನ್ನು ಹಾಕುವಂತೆ ಸಹಾ ಒತ್ತಾಯ ತರುತ್ತಾರೆ. ಇವತ್ತು ಸರ್ಕಾರ ಈ ಕಾರ್ಖಾನೆಯಲ್ಲಿ ಬಹಳಷ್ಟು ಬಂಡವಾಳ ತೊಡಗಿಸಿದೆ. ಈ ರೀತಿ ಸರ್ಕಾರದವರು

ಸದರಿ ಕಾರ್ಖಾನೆಯಲ್ಲಿ ಬಂಡವಾಳವನ್ನು ತೊಡಗಿಸಿದ ಮೇಲೆ, ಆ ಕಾರ್ಖಾನೆಗೆ ಸಂಬಂಧಪಟ್ಟ ವಿಚಾರಗಳ ಬಗ್ಗೆ ಸರ್ಕಾರದವರು ತೀವ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಸಹಕಾರ ಸಚಿವರನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ಎಸ್. ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರ ಕೊಡುವಾಗ ಈ ವಿಷಯವು ನ್ಯಾಯಾಲಯದ ಮುಂದೆ ಇರುವುದರಿಂದ ಈ ಹಂತದಲ್ಲಿ ಈ ಬಗ್ಗೆ ಯಾವುದೇ ಕ್ರಮಕ್ಕೆ ಅವಕಾಶ ಇರುವುದಿಲ್ಲ ಎಂದು ಹೇಳಿದ್ದಾರೆ. ನಾನು ಒಂದು ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ. ಈ ಹಿಂದೆ ಸರ್ಕಾರ ಕರೆದು ಒಂದಷ್ಟು ಸಂವಿಧಾನ ಮಾಡಿದಾಗಲೂ ಕೂಡ ವಿಷಯ ಕೋರ್ಟ್‌ನಲ್ಲೇ ಇತ್ತು. ವಿವಾದ ನ್ಯಾಯಾಲಯದ ಮುಂದೆ ಇದೆ ಎನ್ನುವ ಒಂದೇ ಕಾರಣಕ್ಕೋಸ್ಕರ ಸಂಧಾನ ಮಾಡದೇ ಇರುವುದು ಸರಿಯಲ್ಲ, ಅದಕ್ಕೇನೂ ಅಡ್ಡಿಯಿಲ್ಲ. ಹಿಂದೆ ಮಾಡಿದಂತೆ ಸಂಧಾನ ನಡೆಸಲು ಯಾವ ಆದೇಶ ಕೂಡ ಅಡ್ಡಿ ಬರುವುದಿಲ್ಲ. ಸರ್ಕಾರ ತನ್ನ ಪ್ರಭಾವವನ್ನು, ಶಕ್ತಿಯನ್ನು, ಅಧಿಕಾರವನ್ನು ಉಪಯೋಗಿಸಿ ಆ ಕಂಗಾಲಾಗಿರುವ ಕಾರ್ಮಿಕರ ಹಿತದೃಷ್ಟಿಯಿಂದ ಸಂಧಾನ ನಡೆಸಬೇಕೆಂದು ನಾನು ಸರ್ಕಾರವನ್ನು ಆಗ್ರಹಿಸಲು ಇಷ್ಟಪಡುತ್ತೇನೆ. ಈ ಕಾರ್ಖಾನೆ ಸರ್ಕಾರದ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ನಡೆಯುತ್ತಿದೆ. ನನ್ನ ಹತ್ತಿರ ಇರುವ ಮಾಹಿತಿಯ ಪ್ರಕಾರ ಕಾರ್ಖಾನೆಯಲ್ಲಿ ಒಟ್ಟು 4 ಕೋಟಿ 57 ಲಕ್ಷ ರೂಪಾಯಿಗಳ ಷೇರು ಬಂಡವಾಳ ಇದ್ದು, ಇದರಲ್ಲಿ ಸರ್ಕಾರದ ಪಾಲು ಶೇಕಡ 60ರಷ್ಟು ಅಂದರೆ 2 ಕೋಟಿ 97 ಲಕ್ಷ ರೂಪಾಯಿಗಳಾಗಿದೆ. ಈ ರೀತಿ ಸರ್ಕಾರದ ಹಿಡಿತ ಕಾರ್ಖಾನೆಯ ಮೇಲೆ ಇರುವುದರಿಂದ, ಮೂಗು ಹಿಡಿದರೆ ಬಾಯಿ ಬಿಡಿಸಬಹುದು ಎಂಬ ರೀತಿಯಲ್ಲಿ, ಸರ್ಕಾರ ಅವರನ್ನು ಕರೆಸಿ ಸ್ವಲ್ಪ ಅವರ ಮೇಲೆ ಒತ್ತಡ, ಪ್ರಭಾವ ಬೀರಿ ಕಾರ್ಮಿಕರ ಹಿತದೃಷ್ಟಿಯಿಂದ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ (ಕಾಗೇರಿ): ಮಾನ್ಯ ಅಧ್ಯಕ್ಷರೇ, ಈ ಭದ್ರಾ ಸಕ್ಕರೆ ಕಾರ್ಖಾನೆಯ ವಿಷಯ ಬಹಳ ವರ್ಷಗಳಿಂದಲೂ ಈ ಸದನದಲ್ಲಿ ಮತ್ತು ಮೇಲ್ಮನೆಯಲ್ಲಿ ಚರ್ಚೆಯಾಗುತ್ತಿದೆ. ಇದರ ಬಗ್ಗೆ ಬಹಳ ದೊಡ್ಡ ಕಡತವೇ ಇದೆ. ಕಾರ್ಖಾನೆಯಲ್ಲಿರುವಂತಹ 124 ಜನರಲ್ಲಿ 50 ಜನ ಕೆಲಸಕ್ಕೆ ಹೋಗುತ್ತಿರುವವರನ್ನು ಬಿಟ್ಟು ಇನ್ನುಳಿದ 75 ಜನರ ಸ್ಥಿತಿಯನ್ನು ನೋಡಿದರೆ ದುಃಖವಾಗುತ್ತದೆ. ಅವರು ವಿಧಾನಸೌಧಕ್ಕಾಗಲೀ ಅಥವಾ ಸಕ್ಕರೆ ಕಾರ್ಖಾನೆಗಾಗಲೀ ಅಲೆದಾಡುತ್ತಿರುವುದನ್ನು ನೋಡಿದರೆ ಬಹಳ ವಿಷಾದ ಎನಿಸುತ್ತದೆ. ಅವರ ಮನೆಯ ಪರಿಸ್ಥಿತಿಯಂತೂ ತುಂಬಾ ಕಳವಳಕಾರಿಯಾಗಿದೆ. ಮಾನವೀಯತೆ ಇರುವಂತಹ ಯಾವುದೇ ಪಕ್ಷದ ಸರ್ಕಾರವಿದ್ದರೂ ಮನ ಕರಗುವಂತಹ ವಿಚಾರ ಇದಾಗಿದೆ. ಆ 75 ಜನಕ್ಕೆ ತಮ್ಮ ಭವಿಷ್ಯವೇನು ಎಂಬುದೇ ಗೊತ್ತಿಲ್ಲ. ಇದಕ್ಕೆ ಕಾರಣ, ಅಲ್ಲಿರುವಂತಹ ಆಡಳಿತ ಮಂಡಳಿಯ ನೇತೃತ್ವವನ್ನು ವಹಿಸಿರುವಂತಹ ಅಧ್ಯಕ್ಷರು ಮತ್ತು ಉಳಿದವರು ಇದನ್ನು ಪ್ರತಿಷ್ಠೆ ಪ್ರಶ್ನೆಯಾಗಿ ಮಾಡಿಕೊಂಡಿರುವುದೇ ಆಗಿದೆ. ಯಾವ ಕಾನೂನಿನ ತೊಡಕೂ ಕೂಡ ಇಲ್ಲಿ ಇಲ್ಲ. ಕೇವಲ ಪ್ರತಿಷ್ಠೆಯೇ ಇಲ್ಲಿ ಮುಖ್ಯವಾಗಿದೆ. ಈ 75 ಜನ ಕೆಲಸಕ್ಕೆ ಹೇಗೆ ಬರುತ್ತಾರೆ ಎಂಬುದನ್ನು ನೋಡಿಯೇ ಬಿಡುತ್ತೇನೆ ಎನ್ನುವಂತಹ ನಿಲುವನ್ನು ಆಡಳಿತ ಮಂಡಳಿಯ ಅಧ್ಯಕ್ಷರೇ ತೆಗೆದುಕೊಂಡರೆ ಇವರಿಗೆ ಹೇಗೆ ಪರಿಹಾರ ಸಿಗಲಿಕ್ಕೆ ಸಾಧ್ಯವಿದೆ? ಸರ್ಕಾರ ಭದ್ರಾ ಸಕ್ಕರೆ

ಕಾರ್ಖಾನೆಗೆ ಸಹಾಯ ಮಾಡಿದೆ. ಅಲ್ಲಿರುವಂತಹ ಆಡಳಿತ ಮಂಡಳಿಯ ಅಧ್ಯಕ್ಷರು ಮತ್ತು ಉಳಿದ ಸದಸ್ಯರುಗಳು ಈ ರೀತಿ ಪ್ರತಿಷ್ಠೆಯ ವಿಚಾರವನ್ನಾಗಿ ಇದನ್ನು ಮಾಡಿಕೊಂಡು 75 ಜನರ ಜೀವನದ ಜೊತೆಯಲ್ಲಿ ಚೆಲ್ಲಾಟವಾಡುವುದಕ್ಕೆ ಸರ್ಕಾರ ಬಿಡಬಾರದು. ಸರ್ಕಾರ ದುರ್ಬಲವಾಗಬಾರದು. ಸರ್ಕಾರ ಇಂತಹ ಸಂದರ್ಭದಲ್ಲಿ ಅವರಿಗೆ ನ್ಯಾಯ ಒದಗಿಸುವುದಕ್ಕೆ ಮುಂದಾಗಬೇಕು. ಈ ದಿಸೆಯಲ್ಲಿ ಸರ್ಕಾರ ಬಲಯುತವಾದಂತಹ ನಿಲುವನ್ನು ತೆಗೆದುಕೊಳ್ಳಬೇಕು. ಆಲ್ಲಿರುವಂತಹ ಆಡಳಿತ ಮಂಡಳಿಗೆ ಮನ ಬಂದಂತೆ ನಡೆದುಕೊಳ್ಳುವುದಕ್ಕೆ ಸರ್ಕಾರ ಬಿಡಬಾರದು. ನಾವು ಕಣ್ಣಾರೆ ಅವರನ್ನು ಗಲ್ಲಿಗೆ ಹಾಕುವಂತಹ ಪರಿಸ್ಥಿತಿ ಇವತ್ತು ಇದೆ. ಸರ್ಕಾರ ಬಲಹೀನವಾಗಬಾರದು, ಒಂದು ದೃಢವಾದಂತಹ ನಿರ್ಧಾರವನ್ನು ತೆಗೆದುಕೊಂಡು ಆಡಳಿತ ಮಂಡಳಿಯವರನ್ನು ಕರೆಸಿ ಈ 75 ಜನರನ್ನು ಕೆಲಸಕ್ಕೆ ತೆಗೆದುಕೊಳ್ಳಿ ಎಂದು ನಿರ್ದೇಶನ ಕೊಡಬೇಕು. ಕೋರ್ಟ್‌ನಲ್ಲಿ ಇರುವಂತಹ ಕೇಸನ್ನು ಹಿಂತೆಗೆದುಕೊಳ್ಳಲು ಅವರು ಸಿದ್ಧರಿದ್ದಾರೆ. ಅಪರ ಜೀವನದ ಜೊತೆಗೆ ಚೆಲ್ಲಾಟವಾಡಬೇಡಿ ಎಂದು ಸ್ಪಷ್ಟವಾದಂತಹ ನಿರ್ದೇಶನವನ್ನು ಆಡಳಿತ ಮಂಡಳಿಗೆ ಕೊಡುವಂತಹ ಧೈರ್ಯವನ್ನು ಸರ್ಕಾರ ತೋರಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದಂತಹ ವಿಶ್ವೇಶ್ವರ ಹೆಗಡೆಯವರು ಧೈರ್ಯದ ಬಗ್ಗೆ ಪ್ರಶ್ನೆ ಮಾಡುತ್ತಿದ್ದಾರೆ. ಆ ಧೈರ್ಯ ಇದೆ ಎಂದೇ ನಾನು ಅಮೆಂಡ್‌ಮೆಂಟ್ ತರಲು ಉದ್ದೇಶಿಸಿದ್ದೆ. ನಾನು ಅದರ ಬಗ್ಗೆ ಏನಾದರೂ ಹೇಳುವುದಕ್ಕೆ ಹೋದರೆ ಅದು ಮತ್ತೆ ಎಲ್ಲೆಲ್ಲಿಗೋ ಹೋಗುತ್ತದೆ. ಅಲ್ಲಿ ವಾಸ್ತವಾಂಶ ಏನಿದೆ ಎಂದು ಅವರಿಗೂ ಗೊತ್ತಿದೆ, ನಮಗೂ ಗೊತ್ತಿದೆ. ಇಲ್ಲಿ ಪ್ರತಿಯೊಂದು ವಿಚಾರಕ್ಕೂ ಕೋರ್ಟ್‌ಗೆ ಹೋಗಲಾಗಿದೆ. ಇದು ಬಹಳ ದಿನಗಳಿಂದ ಇದೆ. ಇಲ್ಲಿ ಕಾರ್ಮಿಕರಿಗೆ ಅನ್ಯಾಯವಾಗಿದೆ. ಮಾನ್ಯ ಸುರೇಶ್‌ಕುಮಾರ್‌ರವರು ಈಗ ಒಂದು ಸಲಹೆಯನ್ನು ಕೊಟ್ಟಿದ್ದಾರೆ. ನಾನು ಆ ಬಗ್ಗೆ ಯಾವುದೇ ಪ್ರಯತ್ನ ಮಾಡಿರಲಿಲ್ಲ. ಇಲ್ಲಿ ವಾದವಿವಾದಗಳು ಇದ್ದಿದ್ದರಿಂದ ನಾನು ಆ ಬಗ್ಗೆ ಯೋಚಿಸಿರಲಿಲ್ಲ. ಸ್ಥಳೀಯ ಶಾಸಕರುಗಳಾದ ರವೀಂದ್ರನಾಥ್ ಮತ್ತು ನಾಗಪ್ಪನವರು ಏನೊಂದು ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ, ಅದರ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ನಾನು ಇನ್ನೊಂದು ಸಾರಿ ಅಧ್ಯಕ್ಷರನ್ನು, ಮ್ಯಾನೇಜ್‌ಮೆಂಟ್ ಮತ್ತು ಆಡಳಿತ ಮಂಡಳಿಯವರನ್ನು ಇನ್ನು 15-20 ದಿನಗಳಲ್ಲಿ ಕರೆಸಿ ಮಾತನಾಡುತ್ತೇನೆ. ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಒಂದು ಪ್ರಯತ್ನ ಮಾಡಿ ನೋಡೋಣ. ಬಗೆಹರಿಸಲಿಕ್ಕೆ ಆಗಲಿಲ್ಲವೆಂದರೆ ಕಾನೂನಿನಲ್ಲಿ ಯಾವ ರೀತಿ ಅವಕಾಶ ಇದೆಯೋ, ಯಾವ ರೀತಿ ಇದನ್ನು ಸರಿ ಮಾಡಲಿಕ್ಕೆ ಸಾಧ್ಯವಿದೆಯೋ ಅದನ್ನು ಖಂಡಿತವಾಗಿಯೂ ನಾನು ಮಾಡುತ್ತೇನೆಂದು ಈ ಸಂದರ್ಭದಲ್ಲಿ ನಾನು ಆಶ್ವಾಸನೆ ಕೊಡಲಿಕ್ಕೆ ಬಯಸುತ್ತೇನೆ.

ಶ್ರೀ ಎಸ್.ಎ. ರವೀಂದ್ರನಾಥ್: ಮಾನ್ಯ ಅಧ್ಯಕ್ಷರೇ, ಇದೇ ರೀತಿಯಲ್ಲಿ ಸಸ್ಪೆಂಡ್ ಮಾಡಿದಂತಹವರಿಗೆ, ಅವರಿಗೇ ಬೇಕಾದವರಿಗೆ ಹಂಡ್ರೆಡ್ ಪರ್ಸೆಂಟ್ ಬ್ಯಾಕ್ ವೇಜಸ್ ಕೊಟ್ಟಿದ್ದಾರೆ. ಇವರಿಗೆ ಶೇಕಡ 40 ರಷ್ಟು ಕೊಡುತ್ತೇವೆ ಎಂದು ಒಪ್ಪಿಕೊಂಡು ನಾಲ್ಕು

ವರ್ಷಗಳಾದರೂ ಇನ್ನೂ ಕೊಟ್ಟಿಲ್ಲ. ಕಾರ್ಮಿಕರ ಜೀವನ ಬಹಳ ಕಷ್ಟವಾಗಿದೆ. ದಯವಿಟ್ಟು ಕಾರ್ಮಿಕರಿಗೆ ಶೇಕಡ 40 ರಷ್ಟು ಬ್ಯಾಕ್ ವೇಜಸ್ ಏನು ಕೊಡಬೇಕು ಅದನ್ನು ತುರ್ತಾಗಿ ಕೊಡಿಸುವಂತಹ ಕೆಲಸವನ್ನು ಮಾನ್ಯ ಸಹಕಾರ ಸಚಿವರು ಮಾಡಬೇಕೆಂದು ಕೋರುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್: ಮಾನ್ಯ ಅಧ್ಯಕ್ಷರೇ, ಆದಷ್ಟು ಬೇಗನೇ ನಾನು ಕರೆಸಿ ಅವರನ್ನು ಭೇಟಿ ಮಾಡುತ್ತೇನೆ. ನಾನು ನಿಮಗೆ ಕನ್‌ವೀನಿಯೆಂಟ್ ಆದ ಡೇಟ್‌ವೊಂದನ್ನು ಕೊಡುತ್ತೇನೆ. ಆ ದಿನ ನಿಮ್ಮ ಸಮ್ಮುಖದಲ್ಲೇ ಅವರನ್ನು ಕರೆಸಿಕೊಂಡು ಅದರ ಬಗ್ಗೆ ತೀರ್ಮಾನ ಮಾಡೋಣ.

ಶ್ರೀ ವೈ. ನಾಗಪ್ಪ: ಮಾನ್ಯ ಅಧ್ಯಕ್ಷರೇ, ಎರಡೂ ಸದನಗಳಲ್ಲೂ ಕೂಡ ಇದರ ಬಗ್ಗೆ ಎರಡೆರಡು ಸಾರಿ ಚರ್ಚೆಯಾಗಿದೆ. ಇದರ ಬಗ್ಗೆ ಸದನದ ಸಮಿತಿಯೊಂದನ್ನು ನೇಮಕ ಮಾಡಲಾಗಿದ್ದು ಅದರಲ್ಲಿ ಕೂಡ ಇದರ ಬಗ್ಗೆ ಚರ್ಚೆಯಾಗಿದೆ. ಇದುವರೆಗೂ ಕೂಡ ಈ ಬಗ್ಗೆ ಏನೂ ತೀರ್ಮಾನ ತೆಗೆದುಕೊಂಡಿಲ್ಲವೆಂದರೆ ನನ್ನ ಮನಸ್ಸಿಗೆ ಬಹಳ ಬೇಜಾರಾಗುತ್ತದೆ. ನಾನು ಆಳುವ ಪಕ್ಷದಲ್ಲಿದ್ದರೂ ಕೂಡ ಇವರಿಗೆ ಏನೂ ಮಾಡಲಿಕ್ಕಾಗುತ್ತಿಲ್ಲ. We cannot render the social justice. ಆ ಒಂದು ದೃಷ್ಟಿಯಿಂದ ಸರ್ಕಾರ ಇದನ್ನು ತೀವ್ರವಾಗಿ ಪರಿಗಣಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಹಕಾರ ಸಚಿವರನ್ನು ಮತ್ತೊಮ್ಮೆ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತಾ ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಹೇಳುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್: ಆಗಬಹುದು.

ಅಧ್ಯಕ್ಷರು: ಈಗ ಭೋಜನ ವಿರಾಮಕ್ಕಾಗಿ ಸದನವನ್ನು ಮುಂದೂಡುತ್ತಿದ್ದೇನೆ. ಭೋಜನ ವಿರಾಮದ ನಂತರ ವಿಧೇಯಕಗಳ ಚರ್ಚೆಯನ್ನು ಕೈಗೆತ್ತಿಕೊಳ್ಳೋಣ. ಸದನವು ಮತ್ತೆ ಮಧ್ಯಾಹ್ನ 2.45 ಗಂಟೆಗೆ ಸಮಾವೇಶಗೊಳ್ಳಲಿದೆ.

(ಸದನವು ಮಧ್ಯಾಹ್ನ 1.36 ಗಂಟೆಗೆ ಭೋಜನ ವಿರಾಮಕ್ಕಾಗಿ ಮುಂದೂಡಲ್ಪಟ್ಟಿತು. ಸದನವು ಪುನಃ ಮಧ್ಯಾಹ್ನ 2.45 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

(ಸಭೆಯು 3-10 ಕ್ಕೆ ಪ್ರಾರಂಭವಾಯಿತು. ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಅಧ್ಯಕ್ಷರು: ಮಧ್ಯಾಹ್ನದ ಹೊತ್ತು ಕೋರಂ ಆಗುವುದೇ ಒಂದು ದೊಡ್ಡ ತಾಪತ್ರಯ ಆಗಿಹೋಗಿದೆ. ಎರಡು ಮುಕ್ಕಾಲು ಗಂಟೆಗೆ ಪ್ರಾರಂಭ ಎಂದು ಅನೌನ್ಸ್ ಮಾಡಿದ್ದೇವೆ. ಗಂಟೆ 3-10 ಆದರೂ ಬರದೇ ಇದ್ದರೆ ನಾವು ಏನು ಮಾಡುವುದು? ಚಿಮ್ಮನಕಟ್ಟಿ ಈಗ ತಾವು ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ನಾನು, ಅಪಘಾತಗಳು ಹೆಚ್ಚುತ್ತಿರುವ ಬಗ್ಗೆ ಒಂದು ಹೇಳಿಕೆಯನ್ನು ಮಾನ್ಯ ಮಂತ್ರಿಗಳು ಕೊಡಬೇಕೆಂದು ಹೇಳಿ ನಾಲ್ಕು ದಿವಸದಿಂದ ಒತ್ತಾಯ ಮಾಡುತ್ತಿದ್ದೇನೆ.